

ವೀರೇಂದ್ರ ಹೆಗ್ಗಡೆ ನೆನಪಿಸಿಕೊಳ್ಳುತ್ತಾರೆ.

1982ರಲ್ಲಿ ಧರ್ಮಸ್ಥಳದಲ್ಲಿ 39 ಅಡಿ ಎತ್ತರದ ಬಾಹುಬಲಿ ವಿಗ್ರಹ ಸ್ಥಾಪನೆಯ ವರ್ಷ, ಆದರ ಸವಿನೆನಪಿಗಾಗಿ ಗ್ರಾಮಾಭಿವೃದ್ಧಿ ಸಂಸ್ಥೆ ಶುರುವಾಗಿದೆ. ಭೂಶಕ್ತಿ, ಜನಶಕ್ತಿ, ಜಲಶಕ್ತಿ, ಆರ್ಥಿಕ ಶಕ್ತಿಗಳ ಮಹತ್ವ ಹೇಳುತ್ತ ಹಿಡುವಳಿ ಯೋಜನೆಯಿಂದ ಕೆಲಸ ಆರಂಭವಾಗಿದೆ. ಇಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 5.88 ಲಕ್ಷ ಸ್ವಸಹಾಯ ಸಂಘಗಳು 47.80 ಲಕ್ಷ ಕುಟುಂಬಗಳ ಜೊತೆಗೆ ನಿರಂತರ ಬೃಹತ್ ಸಂಪರ್ಕ ಜಾಲವಿದೆ. ಕಾಯಂ ನೌಕರರು, ಸೇವಾ ಪ್ರತಿನಿಧಿಗಳೆಲ್ಲ ಸೇರಿ 23 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರ ಪಡೆಯಿದೆ. ರಾಜ್ಯದ ಯಾವುದೇ ಜಿಲ್ಲೆಯ ಗ್ರಾಮವನ್ನೂ ತಲುಪುವ ಸಾಧ್ಯತೆಯಿದೆ. ‘ಶ್ರೀ ಕ್ಷೇತ್ರದ ಕುರಿತು ಜನರಿಗೆ ಇರುವ ನಂಬಿಕೆ, ಸಾಮಾಜಿಕ, ಧಾರ್ಮಿಕ ಕಾರ್ಯಗಳು ಜನ ಮನ ಬೆಸೆದಿವೆ. ಹಲವು ಚರ್ಚೆ, ಸಭೆಗಳ ಮೂಲಕ ಕೆರೆಯ ಕೆಲಸಗಳನ್ನು ನಾವು ಆರಂಭಿಸಿದೆವು. ಕಳೆದ ಐದು ವರ್ಷಗಳಲ್ಲಿ 360ಕ್ಕೂ ಹೆಚ್ಚು ಕೆರೆಗಳ ಸಮಗ್ರ ಅಭಿವೃದ್ಧಿ ಸಾಧ್ಯವಾಯಿತು’ ಎಂದು ಹೆಗ್ಗಡೆ ಹೇಳುತ್ತಾರೆ.

ದೊಡ್ಡ ದೊಡ್ಡ ಅಣೆಕಟ್ಟು ಯೋಜನೆಗಳಿಗೆ ನೀಡಿದ ಮಹತ್ವವನ್ನು ಹಳ್ಳಿ ನೀರಿನ ಸಮಸ್ಯೆಯನ್ನು ಹಳ್ಳಿಯಲ್ಲೇ ಪರಿಹರಿಸುವ ಕೆರೆಗಳಿಗೆ ನಾವು ನೀಡಿಲ್ಲ. 1950–2006ರವರೆಗೂ ಕೆರೆಗಳು ನಗಣ್ಯವೆನಿಸಿದವು. ಕೊಳವೆ ಬಾವಿಯಿಂದ ನೀರೆತ್ತುವುದು, ಬೆಳೆಗಳಿಗೆ ಅಧಿಕ ನೀರು ನೀಡುವ ಪದ್ಧತಿಗಳು, ಉಚಿತ ವಿದ್ಯುತ್ ಸೌಲಭ್ಯ, ನಗರೀಕರಣ, ಉದ್ಯಮಗಳ ಹೆಚ್ಚಳದಿಂದ ಯಥೇಚ್ಛ ನೀರು ಬಳಸಿದೆವು. ಇದೇ ಕಾಲದಲ್ಲಿ ಕೆರೆಗಳು



ಉಡುಪಿಯ ಕಾರ್ಕಳದ ಕೆರ್ವಾಶೆಯ ಮಡಿವಾಳ ಕೆರೆ ತುಂಬಿದ ಬಳಿಕ ವೀರೇಂದ್ರ ಹೆಗ್ಗಡೆ ದಂಪತಿಯಿಂದ ಗ್ರಾಮಸ್ಥರ ಜೊತೆಗೆ ಬಾಗಿನ ಸಮರ್ಪಣೆ, ಕೆರೆ ಹಸ್ತಾಂತರ.

ಕಣ್ಮರೆಯಾಗಿ ಮಳೆ ನೀರು ಹರಿದು ನದಿ ಪ್ರವಾಹವಾಗಿ ಸಮುದ್ರ ಸೇರಿತು. ಬೇಸಿಗೆಯಲ್ಲಿ ಕರಾವಳಿ–ಮಲೆನಾಡಿನಲ್ಲಿ ಹೊಳೆ ಹಳ್ಳಗಳಿಗೆ ಒಡ್ಡು ಕಟ್ಟುವ ಪದ್ಧತಿ ಇತ್ತು. ಕೃಷಿ ಬದಲಾವಣೆಗಳಿಂದ ಇಲ್ಲಿ ಅದನ್ನೂ ಕೈಬಿಟ್ಟರು. ಭತ್ತದ ಗದ್ದೆಗಳು ತೋಟಗಳಾದವು. ಗ್ರಾಮದ ನೀರಿನ ಬಳಕೆ ಹೆಚ್ಚುತ್ತ ಸಂರಕ್ಷಣೆಯ ಕುರಿತು ಅಸಡ್ಡೆ ಬೆಳೆಯಿತು.

ಕೆರೆಗಳನ್ನು ಸರ್ಕಾರದ ಯೋಜನೆಯಂತೆ ಯಾರೋ ಗುತ್ತಿಗೆ ಪಡೆದು ಹೂಳು ತೆಗೆಯುತ್ತಾರೆ. ಮಣ್ಣು ಎಲ್ಲೋ ಹಾಕಿ ಹೇಗೋ ಕೆಲಸ ನಡೆಯುತ್ತದೆ. ಗ್ರಾಮಸ್ಥರು ಮೂಕ ಪ್ರೇಕ್ಷಕರಾಗಿ ಇವನ್ನು ನೋಡುತ್ತಾ ನಿಲ್ಲುತ್ತಾರೆ. ನಮ್ಮ ಊರು, ನಮ್ಮ ಕೆರೆಯೆಂಬ ನೈಸರ್ಗಿಕ ಸಂಪತ್ತಿನ ಸಂರಕ್ಷಣೆಯ ಬಗ್ಗೆ ಮೊದಲ ಪಾಠ ಹೇಳಬೇಕಾದ ಕಾಲ ಬಂದಿತು. ಕೆರೆ ಹೂಳು ತೆಗೆದರೆ ಮುಗಿಯುವುದಿಲ್ಲ, ಕೆರೆಗೆ ನೀರು ಬರುವಂತೆ ಕಾಲುವೆ ಮಾಡಬೇಕು. ನಾಳೆ ಕೆರೆ ಹಾಳಾಗದಂತೆ ದಂಡೆ ದುರಸ್ತಿಯಾಗಬೇಕು. ಅಗತ್ಯವಿದ್ದಲ್ಲಿ ಭದ್ರ ಬೇಲಿ ನಿರ್ಮಿಸಬೇಕು, ಮರ ಗಿಡ ಬೆಳೆಸಿ ಊರು ಸುಂದರವಾಗಿ ಕಾಣಲು ಉದ್ಯಾನ ಮಾಡಬೇಕು. ಗ್ರಾಮ ಪಂಚಾಯಿತಿ ಸಹಾಯದಿಂದ ನಿರ್ವಹಣೆಗೆ ಸೂಕ್ತ ವ್ಯವಸ್ಥೆಯಾಗಬೇಕು. ‘ನಮ್ಮೂರು ನಮ್ಮ ಕೆರೆ’ಯ ನಿರ್ಮಾಣ ಮಾರ್ಗದಲ್ಲಿ ಇದು ಸಾಧ್ಯವಾಗಿದೆ.

ರಾಜ್ಯದಲ್ಲಿ ಸಾವಿರಾರು ಕೆರೆಗಳಿವೆ, ಕೆರೆಗಳಿಂದ ಕೆರೆಗೆ ನೀರು ಹರಿಯುವ ಕಾಲುವೆ ವ್ಯವಸ್ಥೆಗಳಿವೆ. ಹವಾಮಾನ ಬದಲಾವಣೆಯ ಈ ಕಾಲದಲ್ಲಿ ಮಳೆ ಯಾವಾಗಲೂ ಬರಬಹುದು. ಆದರೆ, ಬಂದ ಮಳೆ ನೀರು ಹಿಡಿಯಲು ಕೆರೆಗಳನ್ನು ಸಜ್ಜುಗೊಳಿಸಿದರೆ ಮಾತ್ರ ಮುಂದಿನ ಬರ, ಜಲಕ್ಷಾಮ ಗೆಲ್ಲಲು ಸಾಧ್ಯವಿದೆ. ಇದಕ್ಕೆ ನಮ್ಮ ಗ್ರಾಮಗಳು ಅಣಿಗೊಳ್ಳಬೇಕಿದೆಯೆಂದು ಹೆಗ್ಗಡೆ ಎಚ್ಚರಿಸುತ್ತಾರೆ.

‘ನಮ್ಮ ಕೆರೆ ಕಾಯಕದಲ್ಲಿ ಭಾಗವಹಿಸಿದ ಹಳ್ಳಿಗರಿಗೆ ಕೆರೆಯ ಕೆಲಸ ಹೇಗೆ ಮಾಡುವುದೆಂದು ಗೊತ್ತಾಗಿದೆ. ಶತಮಾನಗಳ ಹಿಂದೆ ನಮ್ಮ ಕೆರೆ ತಜ್ಞರು ನಮ್ಮ ಹಳ್ಳಿಯಲ್ಲಿ ಇದ್ದರು. ಈಗ ಪುನಃ ಕೆರೆಯ ಬಗ್ಗೆ ತಿಳಿವಳಿಕೆ ಪಡೆಯುತ್ತ ಕೆರೆ ಉಳಿಸುವುದು ಎಲ್ಲರ ಕೆಲಸವಾಗಬೇಕು’ ಎಂದು ವೀರೇಂದ್ರ ಹೆಗ್ಗಡೆ ಅವರು ಹೇಳುತ್ತಾರೆ.